


ಒಬ್ಬ ಗೊಂಬೆ ತಯಾರಕನಿದ್ದ. ಮರವನ್ನು ಕೆತ್ತಿ ಅವನು ತಯಾರಿಸುವ ಗೊಂಬೆಗಳು ಜೀವಂತವಾಗುತ್ತವೆ ಎಂದು ಜನ ಹೇಳುತ್ತಿದ್ದರು. ಅವನಿಗೆ ಆಂಗ್ ಎಂಬ ಒಬ್ಬನೇ ಮಗನಿದ್ದ. ತಂದೆಯ ವೃತ್ತಿಯನ್ನು ಕಲಿಯದೆ ಅವನು ಗಳಿಸಿದ ಹಣವನ್ನು ಮನ ಬಂದಂತೆ ಖರ್ಚು ಮಾಡುವುದರಲ್ಲೇ ಆಂಗ್ ಕಾಲ ಕಳೆದ. ಹೀಗಿರಲು ತಂದೆಗೆ ಕೊನೆಗಾಲ ಸಮೀಪಿಸಿತು. ಮಗನನ್ನು ಬಳಿಗೆ ಕರೆದು, 'ನನ್ನ ದುಡಿಮೆಯಲ್ಲಿ ನೀನು ಭವಿಷ್ಯಕ್ಕಾಗಿ ಏನೂ ಉಳಿಸಿಕೊಳ್ಳಲಿಲ್ಲ. ಆದರೂ ನಿನಗಾಗಿ ನಾಲ್ಕು ಮರದ ಗೊಂಬೆಗಳನ್ನು ಕೊಡುತ್ತೇನೆ. ಇದರಲ್ಲಿ ಒಂದು ದೇವತೆಯ ಗೊಂಬೆ. ಇದರ ಸದ್ಗುಣ ಬುದ್ಧಿವಂತಿಕೆ. ಎರಡನೆಯದು ರಾಕ್ಷಸನ ಗೊಂಬೆ. ಇದಕ್ಕೆ ಸಾಮರ್ಥ್ಯವೇ ಸದ್ಗುಣ. ಮೂರನೆಯದು ಮಾಂತ್ರಿಕ ಗೊಂಬೆ. ಜ್ಞಾನವೇ ಇದರಲ್ಲಿರುವ ಸದ್ಗುಣ. ನಾಲ್ಕನೆಯ ಗೊಂಬೆ ಒಳ್ಳೆಯತನದ ಸದ್ಗುಣ ಹೊಂದಿರುವ ಸನ್ಯಾಸಿಯದು. ಇದರ ನೆರವಿನಿಂದ ಜೀವನದಲ್ಲಿ ಸುಖವನ್ನು ಗಳಿಸು' ಎಂದು ಆಶೀರ್ವದಿಸಿ ಗೊಂಬೆಗಳನ್ನು ನೀಡಿದ. ಬಳಿಕ ಅವನು ತೀರಿಕೊಂಡ.

ಜೀವನದ ದಾರಿ ಹುಡುಕಿಕೊಂಡು ಗೊಂಬೆಗಳೊಂದಿಗೆ ಆಂಗ್ ಮನೆಯಿಂದ ಹೊರಟು ತುಂಬ ದೂರ ಸಾಗಿದ. ರಾತ್ರಿಯಾಯಿತು. ಒಂದು ಮರದ ಕೆಳಗೆ ಮಲಗಿಕೊಂಡು ನಿದ್ರಿಸತೊಡಗಿದ. ಆಗ ಇದ್ದಕ್ಕಿದ್ದಂತೆ ಅವನಿಗೆ ಎಚ್ಚರವಾಯಿತು. ಯಾರೋ ಕರೆಯುವ ದನಿ ಕೇಳಿಸಿತು. ಅವನು ತಂದಿದ್ದ ದೇವತೆಯ ಗೊಂಬೆ ಜೀವಂತಗೊಂಡು ಅವನನ್ನು ಎಬ್ಬಿಸಿತ್ತು. ಅದು, 'ನೋಡು, ಇಲ್ಲಿಯೇ ಮಲಗಿದ್ದರೆ ಹುಲಿಯೊಂದು ನಿನ್ನನ್ನು ಕೊಂದು ತಿನ್ನಲು ಸನ್ನದ್ಧವಾಗಿದೆ. ತಕ್ಷಣ ಮರವನ್ನೇರಿ ಕುಳಿತುಕೋ' ಎಂದು ಹೇಳಿತು. ಆಂಗ್ ಅವಸರದಿಂದ ಎದ್ದು ಮರವೇರಿ ಕುಳಿತ. ಹೊಂಚು ಹಾಕಿ ಕುಳಿತಿದ್ದ ಹುಲಿ ಬೇಟೆ ಸಿಗಲಿಲ್ಲವೆಂದು ನಿರಾಸೆಯಲ್ಲಿ ಹೊರಟುಹೋಯಿತು. ಬಳಿಕ ಗೊಂಬೆಯು, 'ಕಷ್ಟಪಟ್ಟು ನಿನ್ನ ತಂದೆ ನನ್ನನ್ನು ನಿರ್ಮಿಸಿದ. ಅದಕ್ಕಾಗಿ ಬುದ್ಧಿವಂತಿಕೆಯಿಂದ ನಿನ್ನ ಜೀವವುಳಿಸಿ ಋಣ ತೀರಿಸಿದ್ದೇನೆ. ಇನ್ನು ನಾನು ಬರುತ್ತೇನೆ' ಎಂದು ಹೇಳಿ ಹೊರಟುಹೋಯಿತು.

ಮರುದಿನ ಬೆಳಗಾದ ಮೇಲೆ ಆಂಗ್ ಉಳಿದ ಗೊಂಬೆಗಳೊಂದಿಗೆ ಪಯಣ ಮುಂದುವರೆಸಿದ. ಆಗ ಒಬ್ಬ ಜಮೀನ್ದಾರ ತನ್ನ ಸುಂದರಿಯಾದ ಮಗಳೊಂದಿಗೆ ಎತ್ತಿನ ಗಾಡಿಯಲ್ಲಿ ಕುಳಿತುಕೊಂಡು ಬರುತ್ತಿದ್ದ. ರಾಕ್ಷಸ ಗೊಂಬೆಯು, 'ನೋಡು ಈಗ ನನ್ನ ಸಾಮರ್ಥ್ಯವನ್ನು ತೋರಿಸುತ್ತೇನೆ' ಎಂದು ಹೇಳಿ ನೆಲವನ್ನೊಮ್ಮೆ ತುಳಿಯಿತು. ಇದರಿಂದ ಆ ಪ್ರದೇಶವೇ ಗಡಗಡ ನಡುಗಿತು. ಜಮೀನ್ದಾರನ ಗಾಡಿಯ ಎತ್ತುಗಳು ಭಯದಿಂದ ನೆಟ್ಟಗೆ ನಿಂತವು. ಅನಾಮತ್ತಾಗಿ ಅವನ ಮಗಳು ಕೆಳಗೆ ಬಿದ್ದಳು. ಗಾಡಿಯೆತ್ತುಗಳು ಜಮೀನ್ದಾರನೊಂದಿಗೆ ದಿಕ್ಕು ಸಿಕ್ಕತ್ತ ಓಡಿಹೋದವು. ರಾಕ್ಷಸ ಗೊಂಬೆಯು, 'ನನ್ನ ಸಾಮರ್ಥ್ಯದಿಂದ ಚೆಲುವೆಯಾದ ಹುಡುಗಿಯೊಬ್ಬಳನ್ನು ನಿನಗೆ ಒದಗಿಸಿದ್ದೇನೆ. ಅವಳನ್ನು ಒಲಿಸಿಕೊಂಡು ಮದುವೆಯಾಗು. ಇದರಿಂದ ನಿನ್ನ ತಂದೆ ನನ್ನನ್ನು ರೂಪಿಸಿದ ಋಣ ತೀರಿತು. ನಾನು ಹೋಗುತ್ತೇನೆ' ಎಂದು ಮಾಯವಾಯಿತು.

ಜಮೀನ್ದಾರನ ಮಗಳ ಹೆಸರು ಮಾಯಾ. ಆಂಗ್ ಒಂದು ಕುಟೀರವನ್ನು ಕಟ್ಟಿ ಅದರೊಳಗೆ ಅವಳನ್ನು ಕರೆತಂದ. 'ನನ್ನನ್ನು ಮದುವೆಯಾಗುವೆಯಾ?' ಎಂದು ಕೇಳಿದ. 'ಥೂ! ನಿನ್ನಂತಹ ಬಡವನನ್ನು ನಾನು ಯಾಕೆ ಮದುವೆಯಾಗುತ್ತೇನೆ? ಶ್ರೀಮಂತ ತಂದೆಯ ಮಗಳಲ್ಲಿ ಹೀಗೆ ಕೇಳಲು ನಿನಗೆ ನಾಚಿಕೆಯಾಗುವುದಿಲ್ಲವೆ?' ಎಂದು ಅವಳು ಕೋಪದಿಂದ ಕೇಳಿದಳು. ಇದರಿಂದ ಆಂಗ್ ದುಃಖಪಟ್ಟ. ಆಗ ಮಾಂತ್ರಿಕ ಗೊಂಬೆಯು, 'ಚಿಂತಿಸಬೇಡ. ನಿನ್ನ ತಂದೆ ನನ್ನನ್ನು ಕೆತ್ತಿದ ಋಣ ತೀರಿಸಿ ನಾನು ಹೊರಟುಹೋಗುತ್ತೇನೆ. ನನ್ನ ಜ್ಞಾನದಿಂದ ಸುತ್ತಲಿನ ಬೆಟ್ಟವನ್ನೆಲ್ಲ ಬೆಳ್ಳಿ ಮತ್ತು ಬಂಗಾರವಾಗಿ ಬದಲಾಯಿಸಿ ಒಂದು ಅರಮನೆಯೊಳಗೆ ತುಂಬಿಸಿ ನಿನಗೆ ಕೊಡುತ್ತೇನೆ' ಎಂದು ಹೇಳಿತು. ಮಂತ್ರ ಶಕ್ತಿಯಿಂದ ಅವನನ್ನು ಹೀಗೆ ಧನಿಕನನ್ನಾಗಿ ಮಾಡಿ ಗೊಂಬೆ ಮಾಯವಾಯಿತು.

ಆದರೂ ಮಾಯಾ ಆಂಗ್ ಬಳಿ ನಿಲ್ಲಲಿಲ್ಲ. ತನ್ನ ತಂದೆಯನ್ನು ಹುಡುಕಿಕೊಂಡು ಯಾರಿಗೂ ತಿಳಿಯದಂತೆ ಹೊರಟುಹೋದಳು. ಇದರಿಂದ ಆಂಗ್ ಜೀವನದಲ್ಲೇ ವಿರಕ್ತಿ ಹೊಂದಿದ. ಆಗ ಸನ್ಯಾಸಿಯ ಗೊಂಬೆಯು, 'ನಿನಗೆ ಒಳ್ಳೆಯದಾಗಬೇಕಿದ್ದರೆ ಒಂದು ಪಗೋಡಾ ದೇವಾಲಯವನ್ನು ನಿರ್ಮಿಸಿ ದಾನ ಧರ್ಮಗಳನ್ನು ಅವಿರತವಾಗಿ ಮಾಡು. ಇದರಿಂದ ನಿನ್ನ ತಂದೆಯ ಋಣದಿಂದ ಮುಕ್ತನಾಗುತ್ತಿದ್ದೇನೆ' ಎಂದು ಹೇಳಿ ಅಗೋಚರವಾಯಿತು. ಗೊಂಬೆಯ ಮಾತಿನಂತೆ ಆಂಗ್ ದೇವಾಲಯ ಕಟ್ಟಿಸಿದ. ಯಾರು ಸಹಾಯ ಕೇಳಿಕೊಂಡು ಬಂದರೂ ಇಲ್ಲವೆನ್ನದೆ ಕೊಡುತ್ತಿದ್ದ.

ಮಾಯಾ ತಂದೆಯನ್ನು ಹುಡುಕಿಕೊಂಡು ಹೋದಾಗ ಅವನು ಬರಗಾಲದಿಂದಾಗಿ ಬೆಳೆಯನ್ನೆಲ್ಲ ಕಳೆದುಕೊಂಡು ಬಡವನಾಗಿದ್ದ. ಜೀವನಕ್ಕೆ ಗತಿಯಿಲ್ಲದೆ ತಂದೆ ಮತ್ತು ಮಗಳು ಏನಾದರೂ ಉದ್ಯೋಗ ಸಿಗುವುದೇ ಎಂದು ಹುಡುಕುತ್ತ ಊರೂರು ತಿರುಗಿಕೊಂಡು ಆಂಗ್ ಇರುವಲ್ಲಿಗೆ ಬಂದರು. ಮಾಯಾ ಸನ್ಯಾಸಿ ವೇಷದಲ್ಲಿದ್ದ ಅವನ ಗುರುತು ಹಿಡಿಯಲಿಲ್ಲ. 'ಅಯ್ಯಾ, ನೀವು ದೊಡ್ಡ ಧರ್ಮಾತ್ಮರೆಂದು ಹೇಳುವುದನ್ನು ಕೇಳಿ ಬಂದಿದ್ದೇವೆ. ನಮಗೆ ಏನಾದರೂ ಉದ್ಯೋಗ ಕೊಡಬಹುದೆ?' ಎಂದು ಕೇಳಿದಳು. ಆಂಗ್ ಅವಳನ್ನು ಗುರುತಿಸಿದ.'ಒಂದು ದೊಡ್ಡ ಅರಮನೆಗೆ ನಿನ್ನನ್ನು ರಾಣಿಯನ್ನಾಗಿ ಮಾಡಿ ನಿನ್ನ ತಂದೆಗೂ ಗೌರವದಿಂದ ಆಶ್ರಯ ನೀಡುವುದಾದರೆ ನಿನಗೆ ಒಪ್ಪಿಗೆಯಿದೆಯೇ?' ಎಂದು ಕೇಳಿದ. ಮಾಯಾ ಅಚ್ಚರಿಯಿಂದ, 'ಯಾಕೆ ನನ್ನಲ್ಲಿ ಕನಸುಗಳನ್ನು ಹುಟ್ಟಿಸುತ್ತೀರಿ? ಆಂಗ್ ಎಂಬ ಯುವಕ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಆದರೂ ಅವನ ಪ್ರೇಮವನ್ನು ದ್ವೇಷದಿಂದ ತಿರಸ್ಕರಿಸಿ ಬಂದವಳು ನಾನು. ನನ್ನ ಈ ಅಪರಾಧಕ್ಕಾಗಿ ದೇವರೂ ನನಗೆ ನೆರವಾಗಲಾರ' ಎಂದು ದುಃಖದಿಂದ ಹೇಳಿದಳು.

ಆಂಗ್ ಮಾಯಾಳ ಕೈಗಳನ್ನು ಹಿಡಿದುಕೊಂಡ. ನಗುತ್ತಲೇ, 'ನಿನಗಿನ್ನೂ ನನ್ನ ಗುರುತು ಸಿಕ್ಕಿಲ್ಲವೆ? ನೀನು ತಿರಸ್ಕರಿಸಿ ಹೋದ ವ್ಯಥೆಯಿಂದ ಸನ್ಯಾಸಿಯಾಗಿ ಸಂಪತ್ತನ್ನು ಪರೋಪಕಾರಕ್ಕೆ ಬಳಸುತ್ತಿರುವ ನಿನ್ನ ಪ್ರೇಮಿ ಆಂಗ್ ನಾನೇ' ಎಂದು ಹೇಳಿದ. ಮಾಯಾಳಿಗೆ ಆದ ಸಂತಸ ಅಷ್ಟಿಷ್ಟಲ್ಲ. ಅವನನ್ನು ಮದುವೆಯಾಗಿ ತನ್ನ ತಂದೆಯ ಜೊತೆಗೆ ಸುಖವಾಗಿದ್ದಳು.

(ಬರ್ಮಾ ದೇಶದ ಕಥೆ)

-ಪ.ರಾಮಕೃಷ್ಣ ಶಾಸ್ತ್ರಿ